Janathavani 17-06-2022



ದಾವಣಗೆರೆಯ ಬಿಐಇಟಿ ಕಾಲೇಜು ಆವರಣದಲ್ಲಿ ಶ್ರೀ ಪಶುಪತಿನಾಥ ದೇವಸ್ಥಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಉದ್ಯಮಿ ಎಸ್.ಎಸ್. ಗಣೇಶ್, ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಉಪಸ್ಥಿತರಿದ್ದರು.

DH PHOTO



Chief Minister Basavaraj Bommais offers flowers to the idol of Lord Shiva after inaugurating the Pashupatinath Temple in the premises of Bapuji Institute of Engineering & Technology in Davangere on Thursday. The height of the idol of the Lord is 15 feet. DH PHOTO

DeccanHerald 17-06-2021

# ಮೀಸಲು ಕಲ್ಪಿಸಿ ಜಿಪಂ ತಾಪಂ

Vijayakarnataka 17-06-2022



ದಾವಣಗೆರೆ ಬಿಐಇಟಿ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಪಶುಪತಿ ದೇವಸ್ಥಾನವನ್ನು ಸಿಎಂ ಬಸವರಾಜ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು. ಶಾಸಕ ಶಾಮನೂರು ಶಿವಶಂಕರಪ್ಪ ಇತರರು ಇದ್ದರು.

ಸಲಹೆ ಸೂಚನೆ ಪಡೆದು ವೆಬ್ ಸೈಟ್‌ನಲ್ಲಿ ಪಡೆದ ನಂತರ ಪಠ್ಯ ಪರಿಷ್ಕರಣೆ ಅಂತಿಮ ರೂಪ ಹಾಕಲಾಗುವುದು. ಒಟ್ಟಾರೆ ಎಲ್ಲ ಆಕ್ಷೇಪಣೆ ಸಲಹೆ ಪಡೆಯಲಿದೆ ಎಂದರು.

## ಶಾಲೆ, ಪಶುಪತಿ ದೇವಸ್ಥಾನ ಉದ್ಘಾಟನೆ

ನಗರದ ಎಂಬಿಎ ಕಾಲೇಜು ಮೈದಾನದಲ್ಲಿ ಬಾಪೂಜಿ ವಿದ್ಯಾಸಂಸ್ಥೆಯಿಂದ ನೂತನವಾಗಿ ನಿರ್ಮಿಸಿರುವ ಡಾ. ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಸ್ಕೂಲ್ (ಸಿಬಿಎಸ್‌ಇ) ಶಾಲೆ ಉದ್ಘಾಟಿಸಿದರು. ಎಲ್‌ಕೆಜಿಯಿಂದ ಹತ್ತನೇ ತರಗತಿವರೆಗೆ ಇಲ್ಲಿ ಪ್ರವೇಶಾವಕಾಶವಿದೆ. ಆ ನಂತರ ಬಿಐಇಟಿ ಕಾಲೇಜು ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಪಶುಪತಿ ದೇವಾಲಯ ಲೋಕಾರ್ಪಣೆ ಮಾಡಿದರು. ಈ ವೇಳೆ ಶಾಸಕ ಶಾಮನೂರು ಶಿವಶಂಕರಪ್ಪ, ಪುತ್ರ ಉದ್ಯಮಿ ಎಸ್.ಎಸ್. ಗಣೇಶ್, ಅಥಣಿ ವೀರಣ್ಣ, ಶಿವಗಂಗಾ ಬಸವರಾಜ್ ಇತರರು ಇದ್ದರು.

ಮೇಕೆದಾಟು ವಿಷಯಕ್ಕೆ ಸಂಬಂಧಿಸಿ ಸಿಡಬ್ಲ್ಯುಸಿ ಜತೆ ಮಾತುಕತೆ ನಡೆಸಲಾಗಿದೆ. ತಮಿಳುನಾಡು ಸಚಿವರು ಪ್ರಧಾನಿಗೆ ಪತ್ರ ಬರೆದಿರುವ ವಿಚಾರಕ್ಕೆ ಉತ್ತರಿಸುವ ಅವಶ್ಯಕತೆ ಇಲ್ಲ.

ಈ ವಿಷಯದಲ್ಲಿ ಕೇಂದ್ರಿಯ ಜಲ ಆಯೋಗದ ನಿರ್ಧಾರವೇ ಅಂತಿಮ. ಮುಂದಿನ ವಾರದಲ್ಲಿ ಸಭೆ ಕರೆಯಲ್ಲಿದ್ದು ನಮ್ಮ ವಾದವನ್ನು ಅಲ್ಲಿ ಮಂಡಿಲಾಗುವುದು. ನಮಗೆ ನ್ಯಾಯ ದೊರೆಯುವ ವಿಶ್ವಾಸವಿದೆ. ತಮಿಳುನಾಡು ಹೇಳುವ ವಿಚಾರದಲ್ಲಿ ಯಾವುದೇ ಕಾನೂನಾತ್ಮಕ ವಿಷಯಗಳ ಕಾಮಗಾರಿ ನಡೆಸುವ ಕುರಿತು ಪ್ರಕ್ರಿಯೆಗಳು ನಡೆಯುತ್ತಿದೆ

# ಪಶುಪತಿನಾಥ ದೇವಾಲಯ, ಶಾಲೆಯ ಉದ್ಘಾಟನೆ

ಪ್ರಜಾವಾಣಿ ವಾರ್ತೆ 17-06-2022

ದಾವಣಗೆರೆ: ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ನಿರ್ಮಾಣಗೊಂಡಿರುವ ಪಶುಪತಿನಾಥ ದೇವಸ್ಥಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಲೋಕಾರ್ಪಣೆ ಮಾಡಿದರು. ಬಾಪೂಜಿ ವಿದ್ಯಾಸಂಸ್ಥೆ ವತಿಯಿಂದ ನಿರ್ಮಿಸಲಾಗಿರುವ ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಸ್ಕೂಲ್ (ಸಿಬಿಎಸ್‌ಇ) ಅನ್ನು ಕೂಡ ಇದೇ ಸಂದರ್ಭದಲ್ಲಿ ಉದ್ಘಾಟಿಸಲಾಯಿತು.

**ದೇವಸ್ಥಾನದ ವಿಶೇಷತೆ:** 30 ಅಡಿ ಉದ್ದ 30 ಅಡಿ ಅಗಲದಲ್ಲಿ ದ್ರಾವಿಡ ಶೈಲಿಯಲ್ಲಿ ಈ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಪೂರ್ವಕ್ಕೆ ಧ್ಯಾನ ಮಾಡುವ ಶಿವ, ಪಶ್ಚಿಮಕ್ಕೆ ಪ್ರಳಯ ರುದ್ರ, ದಕ್ಷಿಣಕ್ಕೆ ಅರ್ಧನಾರೀಶ್ವರ, ಉತ್ತರಕ್ಕೆ ಗೌರಿಶಂಕರ ಹೀಗೆ ನಾಲ್ಕು ಕಡೆಗಳಲ್ಲಿ ನಾಲ್ಕು ಮುಖ ಇರುವ ವಿಗ್ರಹಗಳು ಈ ದೇವಾಲಯದ ವಿಶೇಷತೆಯಾಗಿದೆ. ಈ ನಾಲ್ಕು ಮುಖಗಳು ಸೇರಿ ಪಶುಪತಿನಾಥ ದೇವಾಲಯವಾಗಿದೆ.

ತಮಿಳುನಾಡಿನ ವಾಸ್ತುಶಿಲ್ಪಿಗಳು ಈ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಶಾಮನೂರು ಶಿವಶಂಕರಪ್ಪ ಮತ್ತು ಅವರ ಮಕ್ಕಳ ಮಾರ್ಗದರ್ಶನದಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಬಿಐಇಟಿ ಪ್ರಾಂಶುಪಾಲ ಪ್ರೊ. ಅರವಿಂದ್ ತಿಳಿಸಿದರು.

**ಸ್ಕೂಲ್:** ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಅನ್ನು ದಾವಣಗೆರೆಯ ಮಾದರಿ ಸ್ಕೂಲ್ ಆಗಿ ಮಾಡಬೇಕು ಎಂಬ ಉದ್ದೇಶ ಇಟ್ಟುಕೊಂಡು ಬಾಪೂಜಿ ಸಂಸ್ಥೆ ಆರಂಭಿಸಿದೆ. ಈ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ ಶಾಮನೂರು ಶಿವಶಂಕರಪ್ಪ ಸಂಸ್ಥೆಯ ಜಂಟಿ ಕಾರ್ಯದರ್ಶಿಯಾಗಿ ಎಸ್.ಎಸ್. ಮಲ್ಲಿಕಾರ್ಜುನ್, ಅಧ್ಯಕ್ಷರಾಗಿ ಆರ್. ರಮಾನಂದ, ಉಪಾಧ್ಯಕ್ಷರಾಗಿ ಕೆ.ಎ. ಗಿರಿಜಮ್ಮ, ಡಾ. ಎಸ್. ಎಸ್. ನ್ಯಾಷನಲ್ ಪಬ್ಲಿಕ್ ಶಾಲೆಯ ಅಧ್ಯಕ್ಷರಾಗಿ ಎಸ್.ಎಸ್. ಗಣೇಶ್, ಖಜಾಂಚಿ ಎಸ್.ಎಸ್. ನಿರಂಜನ್, ಬಾಪೂಜಿ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾಗಿ ಎ.ಎಸ್. ವೀರಣ್ಣ, ಸದಸ್ಯರಾಗಿ ಪ್ರಭಾ ಮಲ್ಲಿಕಾರ್ಜುನ್, ಎಸ್.ಎಸ್. ಜಯಣ್ಣ ಮತ್ತು ಸಂಪನ್ನ ಮುತಾಲಿಕ್ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಮದುವೆಯಲ್ಲಿ ಹಲವರು ಭಾಗಿ

ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗಳು, ಡಾ.ಎಸ್.ಎಸ್. ಬಕ್ಕೇಶ್–ಪ್ರೀತಿ ದಂಪತಿಯ ಮಗಳು ಅಕ್ಷತಾ ಬಿ. ಶಾಮನೂರು ಅವರ ವಿವಾಹವು ಹುಬ್ಬಳ್ಳಿ ಉಣಕಲ್‌ನ ಚನ್ನು ಪಾಟೀಲ–ದಿವಂಗತ ಪದ್ಮಾ ದಂಪತಿಯ ಮಗ ಅಭಿಷೇಕ್ ಪಾಟೀಲ ಜತೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಗುರುವಾರ ನಡೆಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಬೈರತಿ ಬಸವರಾಜ, ಮಾಧುಸ್ವಾಮಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ, ಶಾಸಕರಾದ ಎಸ್.ವಿ. ರಾಮಚಂದ್ರ, ಪ್ರೊ. ಲಿಂಗಣ್ಣ ಸಹಿತ ವಿವಿಧ ಪಕ್ಷಗಳ ಶಾಸಕರು, ಮುಖಂಡರು, ಅಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ಶುಭ ಹಾರೈಸಿದರು. ಶಾಮನೂರು ಕುಟುಂಬದ ಬೀಗರೂ ಆಗಿರುವ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಮತ್ತು ಅವರ ಕುಟುಂಬದವರೂ ಮದುವೆಗೆ ಸಾಕ್ಷಿಯಾದರು.

## ಎಸ್‌ಎಸ್ 92ನೇ ಜನ್ಮ ದಿನಾಚರಣೆ

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಅವರ 92ನೇ ವರ್ಷದ ಜನ್ಮದಿನವನ್ನು ಗುರುವಾರ ಆಚರಿಸಲಾಯಿತು.

ಶಿವಶಂಕರಪ್ಪ ಅವರ ಮನೆಯಲ್ಲಿ ಕುಟುಂಬದ ಸದಸ್ಯರೆಲ್ಲ ಸೇರಿ ಜನ್ಮದಿನವನ್ನು ಆಚರಿಸಿದರು. ಬಳಿಕ ಎಸ್‌ಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಉದ್ಘಾಟನೆಯಾದ ಬಳಿಕ ಅಲ್ಲಿಯೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಕೇಕ್ ಕತ್ತರಿಸಿ ಜನ್ಮ ದಿನ ಆಚರಿಸಲಾಯಿತು.

ಉದ್ಯಮಿಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ ಅವರೂ ಇದ್ದರು. ಶಾಮನೂರು ಅವರಿಗೆ ಸಾವಿರಾರು ಮಂದಿ ಬಂದು ಶುಭಕೋರಿದರು.



ದಾವಣಗೆರೆಯ ಬಿಐಇಟಿ ಕಾಲೇಜು ಆವರಣದಲ್ಲಿನ ಪಶುಪತಿ ದೇವಸ್ಥಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು.



# ದಾವಣಗೆರೆಯಲ್ಲಿ ದಿನವಿಡೀ ಹಲವು ಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾದ ಮುಖ್ಯಮಂತ್ರಿ ಬೊಮ್ಮಾಯಿ

Nagaravani 17-06-2022



ಬಿಐಇಟಿ ಕಾಲೇಜು ಆವರಣದಲ್ಲಿ ದೇವಸ್ಥಾನದ ಉದ್ಘಾಟನೆ



ಎಸ್.ಎಸ್.ಬಕ್ಕೇಶ್ ಅವರ ಪುತ್ರಿಯ ಮದುವೆಯಲ್ಲಿ ಭಾಗಿ



ಡಾ॥ ಎಸ್‌ಎಸ್ ನ್ಯಾಶನಲ್ ಪಬ್ಲಿಕ್ ಸ್ಕೂಲ್ ಕಟ್ಟಡ ಉದ್ಘಾಟನೆ

ದಾ.ನಗರವಾಣಿ ಸುದ್ದಿ

ದಾವಣಗೆರೆ,ಜೂ.16;ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಗುರುವಾರ ದಿನವಿಡೀ ತಮ್ಮ ರಾಜಕೀಯ ಬದುಕಿನ ಜಂಜಾಟಗಳನ್ನು ಬದಿಗಿಟ್ಟು ನಗರದಲ್ಲಿ ಶಾಮನೂರು ಕುಟುಂಬದ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾದರು.

ಕಾಂಗ್ರೆಸ್ ಹಿರಿಯ ಮುಖಂಡ, ಅಜಾತಶತ್ರು ಡಾ.ಶಾಮನೂರು ಶಿವಶಂಕರಪ್ಪ ಅವರ ಜನ್ಮದಿನ, ಶಿವಶಂಕರಪ್ಪ ಅವರ ಪುತ್ರ ಉದ್ಯಮಿ ಎಸ್.ಎಸ್.ಬಕ್ಕೇಶ್ ಅವರ ಪುತ್ರಿಯ ಮದುವೆ ಮತ್ತು ಬಿಐಇಟಿ ಕಾಲೇಜು ಆವರಣದಲ್ಲಿ ನಿರ್ಮಾಣ ಮಾಡಿರುವ ದೇವಸ್ಥಾನದ ಉದ್ಘಾಟನೆ ಹೀಗೆ ದಿನವಿಡೀ ಶಾಮನೂರು ಕುಟುಂಬ ಆಯೋಜಿಸಿದ್ದ ಕಾರ್ಯಕ್ರಮಗಳಲ್ಲಿ ಸತತವಾಗಿ ಭಾಗವಹಿಸುವ ಮೂಲಕ ರಾಜಕೀಯವಾಗಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿದ್ದರೂ ಸಂಬಂಧಗಳು ದೊಡ್ಡದು ಎನ್ನುವ ಸಂದೇಶ ನೀಡಿದರು.

ಬೆಳಗ್ಗೆ 11.30 ರ ಸುಮಾರಿಗೆ ಬೆಂಗಳೂರಿನಿಂದ ಹೆಲಿಕ್ಯಾಪ್ಟರ್ ಮೂಲಕ ಜಿಎಂಐಟಿ ಹೆಲಿಪ್ಯಾಡಿಗೆ ಆಗಮಿಸಿದ ಮುಖ್ಯಮಂತ್ರಿಗಳು, ಕೆಲ ಕಾಲ ಅಲ್ಲಿನ ಅತಿಥಿ ಗೃಹದಲ್ಲಿ ವಿಶ್ರಾಂತಿ ಪಡೆದು ನಂತರ ನೇರವಾಗಿ ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ನಿವಾಸಕ್ಕೆ ತೆರಳಿ ಇಂದು 92 ನೇ ವಸಂತಕ್ಕೆ ಕಾಲಿರಿಸಿದ ಹಿರಿಯ ಮುತ್ಸದ್ದಿ, ಮಾಜಿ ಸಚಿವ ಡಾ.ಶಾಮನೂರು ಶಿವಶಂಕರಪ್ಪ ಅವರನ್ನು ಭೇಟಿಯಾಗಿ ಆತ್ಮೀಯವಾಗಿ ಅಭಿನಂದಿಸಿ ಉಭಯ ಕುಶಲೋಪರಿ ವಿಚಾರಿಸಿದರು.

ನಂತರ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಉದ್ಯಮಿ ಎಸ್.ಎಸ್.ಬಕ್ಕೇಶ್ ಅವರ ಪುತ್ರಿ ಅಕ್ಷತಾ ಬಿ.ಶಾಮನೂರು ಅವರ ವಿವಾಹ ಮಹೋತ್ಸವದಲ್ಲಿ ಭಾಗವಹಿಸಿ ನೂತನ ದಂಪತಿಗಳಿಗೆ ಶುಭಹಾರೈಸಿದರು.

ಸಂಜೆ 3 ಗಂಟೆ ಸುಮಾರಿಗೆ ಬಿಐಇಟಿ ಕಾಲೇಜು ಆವರಣದಲ್ಲಿ ನಿರ್ಮಾಣ ಮಾಡಿರುವ ನೂತನ ಪಶುಪತಿ ದೇವಾಲಯಕ್ಕೆ ತೆರಳಿದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ದೇವಾಲಯವನ್ನು ಲೋಕಾರ್ಪಣೆಗೊಳಿಸಿದರು. ನಂತರ ಎಂಬಿಎ ಕಾಲೇಜು ಬಳಿ ನೂತನ ಡಾ॥ ಎಸ್‌ಎಸ್ ನ್ಯಾಶನಲ್ ಪಬ್ಲಿಕ್ ಸ್ಕೂಲ್ ಕಟ್ಟಡವನ್ನು ಉದ್ಘಾಟಿಸಿದರು. (3ನೇ ಪುಟಕ್ಕೆ)

# ದಾವಣಗೆರೆಯಲ್ಲಿ ದಿನವಿಡೀ ಹಲವು...

(1ನೇ ಪುಟದಿಂದ) ಈ ಸಂದರ್ಭದಲ್ಲಿ ಛೇರ್ಮನ್ ಎಸ್ ಎಸ್ ಗಣೇಶ್, ಡೀನ್ ಮಂಜುನಾಥ ರಂಗರಾಜನ್, ಪ್ರಿನ್ಸಿಪಾಲ್ ಪ್ರೀತಿ, ವನಿತಾ ಮುಂತಾದವರಿದ್ದರು.

ಕಾರ್ಯಕ್ರಮದಲ್ಲಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಎಸ್.ಎಸ್.ಬಕ್ಕೇಶ್, ಶ್ರೀಮತಿ ಪ್ರೀತಿ ಬಕ್ಕೇಶ್, ಎಸ್. ಎಸ್.ಗಣೇಶ್, ಶ್ರೀಮತಿ ರೇಖಾ ಎಸ್.ಎಸ್.ಗಣೇಶ್, ಹಿರಿಯ ಲೆಕ್ಕ ಪರಿಶೋಧಕ ಅಥಣಿ ವೀರಣ್ಣ, ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷ ಆರ್.ರಮಾನಂದ, ಉಪಾಧ್ಯಕ್ಷೆ ಕೆ.ಎ.ಗಿರಿಜಮ್ಮ, ಖಜಾಂಚಿ ಎ.ಎಸ್.ನಿರಂಜನ್, ಸದಸ್ಯರಾದ ಎಸ್.ಎಸ್.ಜಯಣ್ಣ,ಸಂಪನ್ನ ಮುತಾಲಿಕ್, ಮುಖಂಡರಾದ ಎಸ್.ಕೆ.ವೀರಣ್ಣ, ಡಿ.ಡಿ.ಬಸವರಾಜಪ್ಪ, ಅಂದನೂರು ಬಾಬಣ್ಣ, ಉದಯ ಶಿವಕುಮಾರ್, ಡಾ.ಸುರೇಂದ್ರ ಶೆಟ್ಟಿ, ಡಾ.ದೀಪಕ್ ಬೋಂದಾಡೆ, ದಿನೇಶ್ ಕೆ.ಶೆಟ್ಟಿ, ಸುರಭಿ ಶಿವಮೂರ್ತಿ, ಡಾ.ಎಂ.ಜಿ.ಈಶ್ವರಪ್ಪ, ಬಿಐಇಟಿ ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕ ಡಾ.ವೈ.ವೃಷಬೇಂದ್ರಪ್ಪ, ಕೆಪಿಸಿಸಿ ಸದಸ್ಯ ಹೆಚ್.ದುಗ್ಗಪ್ಪ, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ, ಎ.ನಾಗರಾಜ್, ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಸೇರಿದಂತೆ ಅನೇಕ ಗಣ್ಯರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಶಾಮನೂರು ಕುಟುಂಬ ವರ್ಗ, ಅಭಿಮಾನಿಗಳು, ಹಿತೈಷಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಸರ್ಕಾರದಿಂದ ನೇರ...

(1ನೇ ಪುಟದಿಂದ) ನಮಗೆ ಸಂಬಳ ನೀಡುವವರೆಗೂ ಪ್ರತಿಭಟನೆಯನ್ನು ಮುಂದುವರೆಸುತ್ತೇವೆ. ಗುತ್ತಿಗೆದಾರರ ವಿರುದ್ಧ ಆರಕ್ಷಕ ಠಾಣೆಯಲ್ಲಿ ಶೀಘ್ರವೇ ದೂರು ದಾಖಲಿಸಲಿದ್ದೇವೆ ಎಂದರು. ಸಾಸ್ವೆಹಳ್ಳಿ, ಬಸವಾಪಟ್ಟಣ ಮತ್ತು ಮಲೇಬೆನ್ನೂರು ಉಪ ವಿಭಾಗ ವ್ಯಾಪ್ತಿಯ ನೀರಗಂಟಿಗಳಾದ ಎ. ಕೆ. ಆಂಜನೇಯ, ಯಶವಂತ್ ನಾಯ್ಕ್, ಬಿ. ಶಿವಪ್ಪ, ಸೇರಿದಂತೆ 70ಕ್ಕೂ ಹೆಚ್ಚು ನೀರಗಂಟಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ನಗರದಲ್ಲಿ ಇಂದು ಶ್ರೀ ಪಶುಪತಿನಾಥ ದೇವಸ್ಥಾನದ ಲೋಕಾರ್ಪಣೆ

janathavani 16-06-2022

ಬಿಐಇಟಿ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಪಶುಪತಿನಾಥ ದೇವಸ್ಥಾನವನ್ನು ಇಂದು ಮಧ್ಯಾಹ್ನ 2-20 ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆಗೊಳಿಸಲಿದ್ದಾರೆ.

ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀಮತಿ ಶಾಮನೂರು ಮಲ್ಲಿಕಾರ್ಜುನ್, ಆರ್.ರಮಾನಂದ್, ಶ್ರೀಮತಿ ಕೆ.ಎ.ಗಿರಿಜಮ್ಮ, ಎ.ಎಸ್.ನಿರಂಜನ್, ಎಸ್.ಎಸ್. ಗಣೇಶ್, ಎ.ಎಸ್. ವೀರಣ್ಣ, ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಎಸ್.ಎಸ್.ಜಯಣ್ಣ, ಸಂಪನ್ನ ಮುತಾಲಿಕ್ ಉಪಸ್ಥಿತರಿರುವರು. ನೇಪಾಳದ ರಾಜಧಾನಿ ಕಠ್ಮಂಡುವಿನ ಭಾಗಮತಿ ತೀರದಲ್ಲಿ ನಿರ್ಮಿತವಾಗಿರುವ ವಿಶ್ವ ಪ್ರಸಿದ್ಧ ಪಶುಪತಿನಾಥ ದೇಗುಲದ ಶೈಲಿಯನ್ನು ಹೋಲುವ ಈ ದೇಗುಲದಲ್ಲಿ 15 ಅಡಿ ಎತ್ತರದ ಶಿವನ ಮೂರ್ತಿ ಇದ್ದು, ಮೂರ್ತಿಗೆ ನಾಲ್ಕು ವಿಭಿನ್ನ ಮುಖಗಳಿವೆ. ಪೂರ್ವದಲ್ಲಿ ಧ್ಯಾನ ಶಿವ, ದಕ್ಷಿಣದಲ್ಲಿ ಪ್ರಳಯ ಶಿವ, ಪಶ್ಚಿಮದಲ್ಲಿ ಅರ್ಧನಾರೀಶ್ವರ ಮತ್ತು ಉತ್ತರದಲ್ಲಿ ಗಂಗೆಯ ರೂಪ ಹೊಂದಿದೆ.

Vijayavani 17-06-2022

# 92 ನೇ ಜನ್ಮದಿನದ ಸಂಭ್ರಮದಲ್ಲಿ ಮಿಂದ ಶಾಮನೂರು

## ಸವಿನೆನಪಿಗೆ ಪಶುಪತಿ ದೇಗುಲ, ನ್ಯಾಷನಲ್ ಸ್ಕೂಲ್ ಲೋಕಾರ್ಪಣೆ | ಸಿಎಂ, ಹಲವು ಗಣ್ಯರು ಭಾಗಿ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಗುರುವಾರ ಗಣ್ಯರ ಸಮ್ಮುಖ 92ನೇ ಜನ್ಮದಿನ ಆಚರಿಸಿಕೊಂಡರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಜಗದೀಶ ಶೆಟ್ಟರ್, ಮಾಜಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ಸೇರಿ ಶಾಮನೂರು ಕುಟುಂಬ ಸದಸ್ಯರು, ಬಂಧು ಮಿತ್ರರು, ಆಪ್ತರು ಈ ಸಂದರ್ಭಕ್ಕೆ ಸಾಕ್ಷಿಯಾದರು. ಶಿವಶಂಕರಪ್ಪನವರ ಜನ್ಮದಿನ ಹಾಗೂ ಅವರ ಮೊಮ್ಮಗಳು ಅಕ್ಷತಾಳ ಮದುವೆ ಎರಡೂ ಒಂದೇ ದಿನವಿದ್ದ ಹಿನ್ನೆಲೆಯಲ್ಲಿ ಎರಡೆರಡು ಸಂಭ್ರಮಗಳು ಮನೆ ಮಾಡಿದ್ದವು.

ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಕುಟುಂಬಸ್ಥರ ಜತೆಗೆ ಹುಟ್ಟುಹಬ್ಬದ ಖುಷಿ ಹಂಚಿಕೊಂಡರು. ಬಳಿಕ ನ್ಯಾಷನಲ್ ಪಬ್ಲಿಕ್ ಶಾಲೆ ಉದ್ಘಾಟನೆ ವೇಳೆ ಸಿಎಂ ಬೊಮ್ಮಾಯಿ ಕೇಕ್ ಕತ್ತರಿಸಿ ಶಾಮನೂರು ಅವರಿಗೆ ತಿನ್ನಿಸಿ ಶುಭ ಕೋರಿದರು. ಇದೇ ವೇಳೆ ಬಿಐಇಟಿ ಕಾಲೇಜು ಆವರಣದಲ್ಲಿ ಪಶುಪತಿ ದೇಗುಲ ಲೋಕಾರ್ಪಣೆ ಮಾಡಲಾಯಿತು. ಶಾಮನೂರು ಬಂಧುಗಳು, ಅಭಿಮಾನಿಗಳು ಬುಧವಾರ ರಾತ್ರಿಯೂ ಕೇಕ್ ಕತ್ತರಿಸಿ ಜನ್ಮದಿನದ ಆಚರಣೆಗೆ ಚಾಲನೆ ನೀಡಿದ್ದರು. ಕಾನೂನು ಸಚಿವ ಮಾಧುಸ್ವಾಮಿ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಮಾಜಿ ಸಚಿವ ಎಂ.ಬಿ. ಪಾಟೀಲ್, ಶಾಸಕರಾದ ಎಸ್ .ವಿ.ರಾಮಚಂದ್ರ, ಪುತ್ರ ಎಸ್.ಎಸ್. ಗಣೇಶ್, ಉದ್ಯಮಿಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಡಾ.ಎಂ.ಜಿ. ಈಶ್ವರಪ್ಪ, ಪ್ರೊ.ವೈ. ವೃಷಭೇಂದ್ರಪ್ಪ, ಡಾ.ಎಚ್.ಬಿ. ಅರವಿಂದ್ ಇದ್ದರು.



ದಾವಣಗೆರೆಯಲ್ಲಿ ಶ್ರೀ ಪಶುಪತಿ ದೇವಸ್ಥಾನವನ್ನು ಸಿಎಂ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷೆ ಕಿರುವಾಡಿ ಗಿರಿಜಮ್ಮ, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಇತರರಿದ್ದರು.

> ಮೀಸಲಾತಿ ಹಂಚಿಕೆ ಕುರಿತಂತೆ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಬರಬೇಕಿದೆ. ಮೊದಲ ಹಂತದಲ್ಲಿ ಬಿಬಿಎಂಪಿ ಚುನಾವಣೆ ನಡೆಯಲಿದ್ದು, ತದನಂತರ ರಾಜ್ಯದ ಎಲ್ಲ ಜಿಪಂ, ತಾಪಂಗಳಿಗೆ ಚುನಾವಣೆ ನಡೆಯಲಿದೆ.
>
> | ಬಸವರಾಜ ಬೊಮ್ಮಾಯಿ ಸಿಎಂ

Udayavani17-06-2022



ದಾವಣಗೆರೆ: ಇಲ್ಲಿನ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಆವರಣದಲ್ಲಿ ನಿರ್ಮಿಸಲಾಗಿರುವ ಪಶುಪತಿನಾಥ ದೇವಸ್ಥಾನದ ಲೋಕಾರ್ಪಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ, ಶಾಸಕ ಡಾ। ಶಾಮನೂರು ಶಿವಶಂಕರಪ್ಪ , ಎಸ್.ಎಸ್ . ಗಣೇಶ್, ಅಥಣಿ ಎಸ್. ವೀರಣ್ಣ, ಕಿರುವಾಡಿ ಗಿರಿಜಮ್ಮ ಪಾಲ್ಗೊಂಡಿದ್ದರು.

Samyuktha Karnataka 17-06-2022

## ಫೋಟೋ ಗ್ಯಾಲರಿ



ಮುಖ್ಯಮಂತ್ರಿಗಳಿಗೆ ಸ್ವಾಗತ...



ಪಶುಪತಿ ದೇವಸ್ಥಾನದಲ್ಲಿ ಪೂಜೆ...